# ಬಿ.ಬಿ.ಎಂ.ಪಿ ಮಹದೇವಪುರವಲಯ, ವಾರ್ಡ್ ಸಂಖ್ಯೆ.55, ದೇವಸಂದ್ರ

## ವಾರ್ಡ್ ಸಮಿತಿಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳು** **ದಿನಾಂಕ: 16-10-2021**

ಶ್ರೀ. ಎಂ.ಲಿಯಾಕತ್, ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು,
ಶ್ರೀ. ವಿನಯ್. ಕೆ, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.55, ದೇವಸಂದ್ರ ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿಗಳು,
ಶ್ರೀ. ಮುಕುಂದಪ್ಪ, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ,
ಕು. ಮಹಾಲಕ್ಷ್ಮಿ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ,
ಶ್ರೀ. ಸಿದ್ದರಾಮಯ್ಯ, ತೆರಿಗೆ ನಿರೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ, ಮತ್ತು ವಾರ್ಡ್‌ನ ಸಾರ್ವಜನಿಕರು.

ದಿನಾಂಕ : **16-10-2021** ರಂದು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ, ಬಿ.ಬಿ.ಎಂ.ಪಿ ಮಹದೇವಪುರ ವಲಯದ ವಾರ್ಡ್ ಸಂಖ್ಯೆ.55 ದೇವಸಂದ್ರದ ವಾರ್ಡ್ ಸಮಿತಿಯ ಸಭೆಯನ್ನು ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ. ಎಂ.ಲಿಯಾಕತ್ ಮತ್ತು ವಾರ್ಡ್ ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರಾದ ಶ್ರೀ. ವಿನಯ್.ಕೆ ರವರ ಸಮ್ಮುಖದಲ್ಲಿ ನಡೆಸಲಾಯಿತು.

ವಾರ್ಡ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ವಿನಯ್.ಕೆ ರವರು ಸಭೆಗೆ ಹಾಜರಾದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಂ.ಲಿಯಾಕತ್ ರವರಿಗೆ ಹಾಗೂ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಮೊಟ್ಟಮೊದಲಿಗೆ ಎಲ್ಲಾ ಸದಸ್ಯರ ಪರಸ್ಪರ ಪರಿಚಯ ಮಾಡಿಕೊಂಡು, ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ನಿಯಂತ್ರಣದ ಬಗ್ಗೆ ಸವಿವರವಾಗಿ ಚರ್ಚಿಸಲು ಸಾರ್ವಜನಿಕರಿಗೆ ತಿಳಿಸಲಾಯಿತು.

- ಮೊದಲಿಗೆ ಕಸ ವಿಲೇವಾರಿಯ ಬಗ್ಗೆ ಚರ್ಚಿಸಲಾಗಿ, ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಬಗ್ಗೆ ಚರ್ಚಿಸಲಾಗಿ ಕಸ ವಿಂಗಡಣೆ ಮತ್ತು ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಡೆಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಂತೆಯಲ್ಲಿರುವ ಕಸವನ್ನು ಇಂದೇ ತೆರವುಗೊಳಿಸುವಂತೆ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಆಗಿಂದಾಗ್ಗೆ ಸೊಳ್ಳೆ ನಿಯಂತ್ರಿಸಲು ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.
- ಸಿಂಗಯ್ಯನಪಾಳ್ಯ ನಿವಾಸಿಗಳು ಘನತ್ಯಾಜ್ಯವನ್ನು ಪ್ರತಿ ದಿನ ಸಂಗ್ರಹಿಸುವ ಬಗ್ಗೆ ಕೋರಿದರು. ಅಧ್ಯಕ್ಷರು ಶ್ರೀ. ಮುಕುಂದಪ್ಪ, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ವಾರಕ್ಕೆ ಒಂದು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಶ್ರೀ. ಮುಕುಂದಪ್ಪ, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ವಾರ್ಡ್‌ನಲ್ಲಿ ತೆರಿಗೆ ಸಂಗ್ರಹಣೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಶ್ರೀ. ಸಿದ್ದರಾಮಯ್ಯ, ತೆರಿಗೆ ನಿರೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ ರವರಿಗೆ ಸೂಚಿಸಲಾಯಿತು.
- ಬಿ.ನಾರಾಯಣಪುರ ಕಾಮದೇನು ಬಡಾವಣೆಯ ನಿವಾಸಿಗಳು ಘನತ್ಯಾಜ್ಯವನ್ನು ಪ್ರತಿ ದಿನ ಸಂಗ್ರಹಿಸುವ ಬಗ್ಗೆ ಕೋರಿದರು. ಅಧ್ಯಕ್ಷರು ಶ್ರೀ. ಮುಕುಂದಪ್ಪ, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.55, ದೇವಸಂದ್ರ ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ಗೀತಾ ಕ್ಲೀನಿಕ್ ರಸ್ತೆ ನಿವಾಸಿಗಳು, ಕಾವೇರಿ ನೀರಿನಲ್ಲಿ ಒತ್ತಡ ಕಡಿಮೆ ಇರುವುದರಿಂದ ನೀರಿನ ಒತ್ತಡ ಹೆಚ್ಚಿಸಲು ಬಿ.ಡಬ್ಲ್ಯು.ಎಸ್.ಎಸ್.ಬಿ ಅಭಿಯಂತರರಿಗೆ ತಿಳಿಸಲಾಯಿತು.

- ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ವರೆಗೆ ತಾತ್ಕಾಲಿಕವಾಗಿ ರಸ್ತೆಗಳಲ್ಲಿನ ಗುಂಡಿಗಳ ಬಗ್ಗೆ ಗಮನ ಹರಿಸಿ ತುರ್ತಾಗಿ ಕ್ರಮವಹಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಗಾವಹಿಸಲು ಸಹಾಯಕ ಅಭಿಯಂತರರಾದ ಶ್ರೀ. ವಿನಯ್.ಕೆ ರವರಿಗೆ ತಿಳಿಸಲಾಯಿತು.
- ಕೋವಿಡ್-19 ಸಾಂಕ್ರಮಿಕವನ್ನು ತಡೆಯಲು ಕೈಗೋಡಿರುವ ಕ್ರಮಗಳ ಬಗ್ಗೆ ಸಹಾಯಕ ಅಭಿಯಂತರರಾದ ಶ್ರೀ. ವಿನಯ್.ಕೆ ಮತ್ತು ಶ್ರೀ. ಮುಕುಂದಪ್ಪ, ಆರೋಗ್ಯ ಪರಿವೀಕ್ಷಕರು ಸವಿವರವಾಗಿ ಸಭೆಗೆ ತಿಳಿಸಿದರು.
- ಸದಸ್ಯರು ಆಗಿಂದಾಗೆ ಕಾಮಗಾರಿಗಳನ್ನು ಪರಿವೀಕ್ಷಿಸಿ ಉತ್ತಮ ಸಲಹೆಗಳನ್ನು ಹಾಗೂ ಅತ್ಯವಶ್ಯಕವಾಗಿರುವ ಕಾಮಗಾರಿಗಳನ್ನು ಗುರುತಿಸಿ ಮುಂದಿನ ಸಭೆಯಲ್ಲಿ ತಿಳಿಸಲು ಕೋರಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ
ಮತ್ತು ನೋಡಲ್ ಅಧಿಕಾರಿ

ವಾರ್ಡ್ ಸಮಿತಿ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು